ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಸಿ.ಜೆ.ಎಂ.,
ನ್ಯಾಯಾಲಯ, ಚಿಕ್ಕಮಗಳೂರು.

<u>ಸಿ.ಸಿ.1245/2021</u>

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಶ್ರೀಧರ ಡಿ | ಪಿ.ಡಬ್ಲ್ಯೂ.7 |
| ತಂದೆಯ ಹೆಸರು | : | ತಿಮ್ಮಪ್ಪ ಪಿ | ಸಿ.ಡಬ್ಲ್ಯೂ.18 |
| ವಯಸ್ಸು | : | 31 ವರ್ಷ | |
| ವೃತ್ತಿ | : | ಪಿ.ಸಿ.ನಂ.513, ಸಖರಾಯಪಟ್ಟಣ ಪೊಲೀಸ್ ಠಾಣೆ, | |
| ವಾಸ | : | ಮರಡಿಹಳ್ಳಿ | |

<u>ದಿನಾಂಕಃ 09-06-2026 ರಂದು ಪ್ರಮಾಣ ವಚನ ಭೋದಿಸಲಾಯಿತು.</u>

<u>ಮುಖ್ಯ ವಿಚಾರಣೆಃ ಅಭಿಯೋಜನೆ ಪರ ಮಾನ್ಯ ಎಪಿಪಿ ರವರಿಂದಃ-</u>

ನಾನು 2017 ರಿಂದ 2020 ರವರೆಗೆ ಚಿಕ್ಕಮಗಳೂರು ನಗರ ಪೊಲೀಸ್ ಠಾಣೆಯಲ್ಲಿ ಪಿ.ಸಿ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ22.10.2019 ರಂದು ಈ ಪ್ರಕರಣದಲ್ಲಿ ಸೀಲು ಮಾಡಿರುವಂತಹ ಗಾಂಜಾ ತುಂಬಿದ 2 ಪ್ಲಾಸ್ಟಿಕ್ ಚೀಲಗಳನ್ನು ಬೆಂಗಳೂರಿನ ಮಡಿವಾಳದ ರಾಸಾಯನಿಕ ವಿಶ್ಲೇಷಣಾ ಪ್ರಯೋಗಾಲಯಕ್ಕೆ ತೆಗೆದುಕೊಂಡು ಹೋಗಿರುತ್ತೇನೆ. ಈ ದಿನ ನ್ಯಾಯಾಲಯದ ಮುಂದೆ ಇರುವ ಮು.ಮಾ.1 ಮತ್ತು 2 ನ್ನು ನೋಡಿ ಗುರುತಿಸುತ್ತೇನೆ.

<u>ಪಾಟೀ ಸವಾಲುಃ 5 ನೇ ಆರೋಪಿ ಪರ ವಕೀಲರಿಂದಃ-</u>

ನಾನು ಬೆಂಗಳೂರು ಎಫ್.ಎಸ್.ಎಲ್ ಪ್ರಯೋಗಾಲಯಕ್ಕೆ ತೆಗೆದುಕೊಂಡು ಹೋದ 2 ಬ್ಯಾಗುಗಳ ಪೈಕಿ ಒಂದು ಬಿಳಿ ಚೀಲದಲ್ಲಿ 390 ಗ್ರಾಂ ಗಾಂಜಾ ಹಾಗೂ ಕೆಂಪು ಬಣ್ಣದ ಚೀಲದಲ್ಲಿ 330 ಗ್ರಾಂ ಗಾಂಜಾ ಇತ್ತು. ನಾನು ಪರೀಕ್ಷೆಗೆ ತೆಗೆದುಕೊಂಡು ಹೋಗುವ ಪೂರ್ವದಲ್ಲಿ ಸದರಿ ಪ್ಲಾಸ್ಟೀಕ್ ಚೀಲಗಳು ಸೀಲು ಆಗಿದ್ದವು. ಈಗ ನ್ಯಾಯಾಲಯದ ಮುಂದೆ ಇರುವ 2 ಪ್ಲಾಸ್ಟೀಕ್ ಬ್ಯಾಗುಗಳು ಬಿಳಿ ಬಣ್ಣದವುಗಳು ಇರುತ್ತದೆ ಎಂದರೆ ಸರಿ. ನನಗೆ ಈ ಕೇಸಿನ ಬಗ್ಗೆ ಯಾವುದೇ ಮಾಹಿತಿ ಇಲ್ಲದೇ ಇದ್ದರೂ ಕೂಡಾ ನನ್ನ ಮೇಲಾಧಿಕಾರಿಗಳ ಮಾತು ಕೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲುಃ 3 ನೇ ಆರೋಪಿ ಪರ ವಕೀಲರಿಂದಃ-</u>

(3 ನೇ ಆರೋಪಿ ಪರ ವಕೀಲರು 5 ನೇ ಆರೋಪಿ ಪರ ವಕೀಲರ ಪಾಟೀ ಸವಾಲನ್ನು ಅಳವಡಿಸಿಕೊಳ್ಳಲು ಕೋರಿದ್ದು ಅಳವಡಿಸಿದೆ).

<u>ಪಾಟೀ ಸವಾಲುಃ 2 ಮತ್ತು 4 ನೇ ಆರೋಪಿ ಪರ ವಕೀಲರಿಂದಃ-</u>

ನಾನು ಗಾಂಜಾ ತುಂಬಿದ ಪ್ಲಾಸ್ಟೀಕ್ ಬ್ಯಾಗ್ ಗಳನ್ನು ರಾಸಾಯನಿಕ ಪರೀಕ್ಷೆಗಾಗಿ ತೆಗೆದುಕೊಂಡು ಹೋಗಿಲ್ಲ ಎಂದರೆ ಸರಿಯಲ್ಲ. ಆರೋಪಿತರಿಗೂ ಮು.ಮಾ.1 ಮತ್ತು 2 ಕ್ಕೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ತಿಳಿಸಿದ ವಿಷಯ ಸುಳ್ಳು ಇರುತ್ತದೆ ಎಂದರೆ ಸರಿಯಲ್ಲ.

(ಉಳಿದಂತೆ 2 ಮತ್ತು 4 ನೇ ಆರೋಪಿ ಪರ ವಕೀಲರು 5 ನೇ ಆರೋಪಿ ಪರ ವಕೀಲರ ಪಾಟೀ ಸವಾಲನ್ನು ಅಳವಡಿಸಿಕೊಳ್ಳಲು ಕೋರಿದ್ದು ಅಳವಡಿಸಿದೆ).

<u>ಮರು ವಿಚಾರಣೆಃ ಇಲ್ಲಾ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)
ಓಃಹೇಃಕೇಃಸಃಇಃಎಃಒಃ

ಸಹಿ/-
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ಮತ್ತು ಸಿ.ಜೆ.ಎಂ.,ಚಿಕ್ಕಮಗಳೂರು.

ಎಸ್ಆರ್ಃ